# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ.ಕೇಸ್ ನಂ. 20/2017**

**ದೋ.ಸಾ. :21 ಪ್ರಾ.ಸಾ. : 18**

| | | |
|---|---|---|
| ಸಾಕ್ಷಿಯ ಹೆಸರು | : | ಬಸಪ್ಪ ಡಿ. ಬುರ್ಲಿ |
| ತಂದೆಯ ಹೆಸರು | : | ದುರ್ಗಪ್ಪ ಬುರ್ಲಿ |
| ವಯಸ್ಸು | : | 67 ವರ್ಷ |
| ಕೆಲಸ | : | ನಿವೃತ್ತ ಪೊಲೀಸ್ ನಿರೀಕ್ಷಕರು |
| ವಾಸ | : | ಬೆಳಗಾವಿ |

**ದಿನಾಂಕಃ 03-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-</u>**

1. ದಿ.11-10-2016 ರಿಂದ ದಿ.12-01-2018 ರವರೆಗೆ ಅಂಕೋಲಾ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.24-01-2017 ರಂದು ಚಾಸಾ-20 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು, ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಚಾಸಾ-1 ರವರನ್ನು ನಮ್ಮ ಸಿಬ್ಬಂದಿಯೊಂದಿಗೆ ವೈದ್ಯಕೀಯ ಪರೀಕ್ಷೆಗಾಗಿ ಕೋರಿಕೆ ಪತ್ರದೊಂದಿಗೆ ಅಂಕೋಲಾ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಪರೀಕ್ಷೆಯ ನಂತರ ಅದೇ ದಿನ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಕೋರಿಕೆ ಪತ್ರವನ್ನು ಹಾಗೂ ವರದಿಯನ್ನು ಈಗಾಗಲೇ ನಿಪಿ-21 ಮತ್ತು 22 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಮತ್ತು 22(ಬಿ) ಎಂದು ಗುರುತಿಸಲಾಯಿತು. ಪಿರ್ಯಾದಿಯು ತನ್ನ ದೂರಿನಲ್ಲಿ ಈ ಪ್ರಕರಣದ ಆಪಾದಿತನನ್ನು ತನ್ನ ಮನೆಯಲ್ಲಿ ಹಿಡಿದು ಇಟ್ಟಿರುವುದಾಗಿ ತಿಳಿಸಿದ ಮೇರೆಗೆ, ನಾನು ನಮ್ಮ ಸಿಬ್ಬಂದಿಗಳನ್ನು ಪಿರ್ಯಾದಿಯವರ ಮನೆಗೆ ಕಳುಹಿಸಿ, ಆತನನ್ನು ಕರೆತಂದು ಠಾಣೆಗೆ ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ನಮ್ಮ

ಸಿಬ್ಬಂದಿಗಳು ಪಿರ್ಯಾದಿಯವರ ಮನೆಗೆ ಹೋಗಿ ಆಪಾದಿತನನ್ನು ಕರೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿದ್ದು, ನಾನು ಆತನನ್ನು ನೋಡಿದಾಗ ಅವನ ತಲೆಯಲ್ಲಿ ಗಾಯಗಳು ಕಂಡುಬಂದಿದ್ದು, ಚಿಕಿತ್ಸೆಗಾಗಿ ಆತನನ್ನು ನಮ್ಮ ಸಿಬ್ಬಂದಿಯೊಂದಿಗೆ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ.

2. ಚಿಕಿತ್ಸೆಯ ನಂತರ ಅದೇ ದಿನ ಆರೋಪಿತನನ್ನು ನಮ್ಮ ಠಾಣೆಗೆ ಕರೆದುಕೊಂಡು ಬಂದಿದ್ದು, ನಾನು ಆತನನ್ನು ವಿಚಾರಣೆಗೊಳಪಡಿಸಿ, ದಸ್ತಗಿರಿ ನಿಯಮ ಪಾಲಿಸಿ, ಮರುದಿನ ಅಂದರೆ ದಿ.25-01-2017 ರಂದು ಆರೋಪಿಯು ಲೈಂಗಿಕ ಕ್ರಿಯೆ ನಡೆಸಲು ಶಕ್ತನಿರುವ ಬಗ್ಗೆ ವೈದ್ಯಕೀಯ ತಪಾಸಣೆ ನಡೆಸಿ ಪ್ರಮಾಣ ಪತ್ರ ನೀಡುವಂತೆ ಸರಕಾರಿ ಆಸ್ಪತ್ರೆಯ ವೈದ್ಯರಿಗೆ ಕೋರಿಕೆ ಪತ್ರದೊಂದಿಗೆ ಆತನನ್ನು ಸರಕಾರಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಸದರಿ ಪರೀಕ್ಷೆಯ ನಂತರ ಆತನನ್ನು ನಮ್ಮ ಸಿಬ್ಬಂದಿಗಳೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ಆರೋಪಿಯ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು. ವೈದ್ಯಕೀಯ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು.

3. ದಿ.25-01-2017 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಸ್ಥಳದಲ್ಲಿದ್ದ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಸ್ಥಳದಲ್ಲಿ ಹಾಜರಿದ್ದ ಚಾಸಾ-1 ರವರು ತೋರಿಸಿದ ಸ್ಥಳವನ್ನು ಪರಿಶೀಲಿಸಿ, ಬೆಳಿಗ್ಗೆ 9.30 ರಿಂದ 10.30 ರವರೆಗೆ ನಿಪಿ-1 ರಂತೆ ಪಂಚನಾಮೆ ಮಾಡಿ, ನಿಪಿ-2 ರಂತೆ ನಕಾಶೆ ತಯಾರಿಸಿ, ನಿಪಿ-3 ರಿಂದ 7 ರಂತೆ ಫೋಟೊಗಳನ್ನು ತೆಗೆಸಿರುತ್ತೇನೆ. ನಿಪಿ-1 ಮತ್ತು 2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಮತ್ತು 2(ಸಿ) ಎಂದು ಗುರುತಿಸಲಾಯಿತು. ನಂತರ ಚಾಸಾ-4 ರವರು ಒಂದು ವಿವೋ ಮೊಬೈಲನ್ನು ಹಾಜರುಪಡಿಸಿ, ಸದರಿ ಮೊಬೈಲ್ ಆರೋಪಿಗೆ ಸೇರಿದ ಮೊಬೈಲ್ ಎಂದು ಹೇಳಿದ ಮೇರೆಗೆ, ಅದನ್ನು ಪಂಚರ ಸಮಕ್ಷಮ ಬೆಳಿಗ್ಗೆ 11.00 ರಿಂದ 11.45 ರವರೆಗೆ ನಿಪಿ-8 ರಂತೆ ಜಪ್ತುಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡಿರುತ್ತೇನೆ ಹಾಗೂ ಫೋಟೊಗಳನ್ನು ತೆಗೆಸಿರುತ್ತೇನೆ. ನಿಪಿ-8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ಈಗಾಗಲೇ ನಿಪಿ-9, 10, 11 ಎಂದು ಗುರುತಿಸಲಾಗಿರುತ್ತದೆ. ಸದರಿ

ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿರುತ್ತದೆ.

4. ಅದೇ ದಿನ ಸಾಕ್ಷಿದಾರರಾದ ಚಾಸಾ-4 ರಿಂದ 7, 12 ಮತ್ತು 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಜಪ್ತುಪಡಿಸಿಕೊಂಡ ವಿವೋ ಮೊಬೈಲನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿ.26-01-2017 ರಂದು ಈ ಪ್ರಕರಣದ ಘಟನೆ ನಡೆದ ಮನೆಯ ನಂ.1699 ಯು ಯಾರ ಹೆಸರಿನಲ್ಲಿರುತ್ತದೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಬಾವಿಕೇರಿ ಪಂಚಾಯತ್ ನ ಪಿ.ಡಿ.ಓ ರವರಿಗೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ನಿಪಿ-17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾಸಾ-8 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

5. ದಿ.10-02-2017 ಅಂಕೋಲಾ ಸರಕಾರಿ ಆಸ್ಪತ್ರೆಯವರು ಈ ಪ್ರಕರಣದ ನೊಂದ ಮಹಿಳೆಯ ವೈದ್ಯಕೀಯ ಪರೀಕ್ಷೆಯ ಕಾಲಕ್ಕೆ ಸಂಗ್ರಹಿಸಿದ ಒಟ್ಟು 6 ವಸ್ತುಗಳನ್ನು ನಮ್ಮ ಠಾಣಾ ಮಹಿಳಾ ಸಿಬ್ಬಂದಿಯವರು ತಂದು ಹಾಜರುಪಡಿಸಿದ್ದು, ಅವುಗಳನ್ನು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.30 ರವರೆಗೆ ನಿಪಿ-12 ರಂತೆ ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡು ಅದನ್ನು, ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಿಪಿ-12 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು. ಅದೇ ದಿನ, ನಮ್ಮ ಸಿಬ್ಬಂದಿಗಳು ಆರೋಪಿಯ ವೈದ್ಯಕೀಯ ಪರೀಕ್ಷೆಯ ಕಾಲಕ್ಕೆ ಸಂಗ್ರಹಿಸಿದ ವಸ್ತುಗಳನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 12.00 ರಿಂದ 12.45 ರವರೆಗೆ ನಿಪಿ-13 ರಂತೆ ಪಂಚನಾಮೆ ಮಾಡಿ, ಜಪ್ತುಪಡಿಸಿಕೊಂಡು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಿಪಿ-13 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಸಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ನಂತರ ಸದರಿ ವಸ್ತುಗಳನ್ನು ನಮ್ಮ ಸಿಬ್ಬಂದಿಯಾದ ರಾಜೇ ಸಾಬ್ ದಳವಾಯಿಯವರ ಮೂಲಕ ಆರ್.ಎಫ್.ಎಸ್.ಎಲ್., ಮಂಗಳೂರು ರವರಿಗೆ ಕಳುಹಿಸಿಕೊಟ್ಟಿರುತ್ತೇನೆ.

6. ದಿ.13-02-2017 ರಂದು ನೊಂದ ಮಹಿಳೆಯ ಕಲಂ.164 ರಡಿಯಲ್ಲಿ ಹೇಳಿಕೆಯನ್ನು ದಾಖಲಿಸಿಕೊಳ್ಳಲು ಆಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ.21-02-2017

ರಂದು ಅಂಕೋಲಾದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ನಿಪಿ–14 ರಂತೆ ಕೋರಿಕೊಂಡಿರುತ್ತೇನೆ. ನಿಪಿ–14 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–14(ಎ) ಎಂದು ಗುರುತಿಸಲಾಯಿತು. ಆನಂತರ ದಿ.03–03–2017 ರಂದು ಬಾವಿಕೇರಿ ಪಂಚಾಯತ್ ನ ಪಿ.ಡಿ.ಓ. ರವರು ಮನೆ ನಂ.1699 ರ ಮನೆಯು ಚಾಸಾ–7 ಸಚಿನ್ ರಮೇಶ್ ನಾಯ್ಕ ರವರ ಹೆಸರಿನಲ್ಲಿರುತ್ತದೆ ಎಂದು ನಿಪಿ–18 ರಲ್ಲಿ ಮಾಹಿತಿ ನೀಡಿರುತ್ತಾರೆ. ನಿಪಿ–18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–18(ಬಿ) ಎಂದು ಗುರುತಿಸಲಾಯಿತು. ದಿ.07–03–2017 ರಂದು ನಮ್ಮ ಸಿಬ್ಬಂದಿಯಾದ ರಾಜೇ ಸಾಬ್ ದಳವಾಯಿಯವರು ಆರ್.ಎಫ್.ಎಸ್.ಎಲ್., ಮಂಗಳೂರು ರವರಿಂದ ಸ್ವೀಕೃತಿ ಪತ್ರ ಪಡೆದುಕೊಂಡು ಬಂದು, ನನ್ನ ಮುಂದೆ ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಸ್ವೀಕೃತಿ ಪತ್ರವನ್ನು ನಿಪಿ–25 ಎಂದು, ಸಾಕ್ಷಿಯ ಸಹಿಯನ್ನು ನಿಪಿ–25(ಎ) ಎಂದು ಗುರುತಿಸಲಾಯಿತು.

7. ದಿ.08–03–2017 ರಂದು ಪಿರ್ಯಾದಿಯ ಪಿರ್ಯಾದಿಯ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಚಾಸಾ–14 ಮತ್ತು 15 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.10–03–2017 ರಂದು ಅಂಕೋಲಾದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಿಂದ ಘಟನಾ ಸ್ಥಳದ ನಕಾಶೆಯನ್ನು ಕವಚ ಪತ್ರದೊಂದಿಗೆ ಪಡೆದುಕೊಂಡಿರುತ್ತೇನೆ. ನಕಾಶೆಯನ್ನು ಹಾಗೂ ಕವಚ ಪತ್ರವನ್ನು ಈಗಾಗಲೇ ನಿಪಿ–15 ಮತ್ತು 16 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–15(ಬಿ) ಮತ್ತು 16(ಎ) ಎಂದು ಗುರುತಿಸಲಾಯಿತು. ದಿ.16–03–2017 ರಂದು ಅಂಕೋಲಾದ ಜೆ.ಎಂ.ಎಫ್.ಸಿ., ನ್ಯಾಯಾಲಯದಿಂದ ಪಿರ್ಯಾದಿಯ ಕಲಂ.164 ರಡಿಯಲ್ಲಿ ದಾಖಲಿಸಿಕೊಂಡ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–26 ಎಂದು ಗುರುತಿಸಲಾಯಿತು.

8. ಈಗಾಗಲೇ ತನಿಖೆಯಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ, ಎಫ್.ಎಸ್.ಎಲ್. ವರದಿಯನ್ನು ಬಾಕಿಯಿಟ್ಟು, ದಿ.16–03–2017 ರಂದು ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದಿ.06–07–2017 ರಂದು ಆರ್.ಎಫ್.ಎಸ್.ಎಲ್., ಮಂಗಳೂರು ರವರಿಂದ ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿ, ಅದನ್ನು ಹೆಚ್ಚುವರಿ ದೋಷಾರೋಪಣಾ ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಎಫ್.ಎಸ್.ಎಲ್. ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–27 ಎಂದು, ಸಾಕ್ಷಿಯ ಸಹಿಯನ್ನು ನಿಪಿ–27(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**ಮರುವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ